ಶ್ರೀ ಎಂ.ಸಿ. ಬಸಪ್ಪ.—ಮಾನ್ಯ ಅಧ್ಯಕ್ಷರೇ, ತಾವು ಪ್ರಶ್ನೆಗಳನ್ನು ಕಳುಹಿಸಬೇಡಿ ಎಂದು ಹೇಳಿ ಬಿಡಿ. ಸರಿಯಾದ ಉತ್ತರವನ್ನು ಪಡೆಯುವುದಕ್ಕಾಗಿ ನಾವು ಸರ್ಕಾರಕ್ಕೆ ಉತ್ತರ ಹಾಕುತ್ತೇವೆ ನಮ್ಮಲ್ಲಿ ಕೆಲವರು ಮಾನ್ಯ ಸಚಿವರು ಉತ್ತರ ಕೊಟ್ಟಿರೆ ಆದೇನೆಂದು ಅವರಿಗೇ ಗೊತ್ತಾಗುತ್ತದೋ ಇಲ್ಲವೋ ತಿಳಿಯುವುದಿಲ್ಲ ಆದುದರಿಂದ, ಮಾನ್ಯ ಸಚಿವರುಗಳಿಗೆ ಸೂಚನೆ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಗೊತ್ತಿಲ್ಲದಿದ್ದರೆ, ಗೊತ್ತಿಲ್ಲವೆಂದು ಮಾನ್ಯ ಸಚಿವರು ಹೇಳಲಿ.

ಶ್ರೀ ಆರ್. ಗುಂಡೂರಾವ್.—ಅತಿ ಶೀಘ್ರವಾಗಿ ಚುನಾವಣೆಯನ್ನು ನಡೆಸಲಾಗುವುದೆಂದು ಮಾನ್ಯ ಸಚಿವರು ಹೇಳಿದ್ದಾರೆ. ಶೀಘ್ರವೆನ್ನುವ ಬದಲು, ಇಂತಹದ್ದೇ ದಿವಸ ಮಾಡುತ್ತೇವೆಂದು ಭರವಸೆ ಕೊಡಿ ಎಂದರೆ. ಯಾರೂ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರ ಆತುರವನ್ನು ಗಮನಿಸಿ, ಇನ್ನೂ ಶೀಘ್ರವಾಗಿ ಮಾಡಲಾಗುವುದು.

ಶ್ರೀ ಎಂ.ಸಿ. ಬಸಪ್ಪ.—ಚುನಾವಣೆ ನಡೆಸಬೇಕೆಂದು ಸರ್ಕಾರದ ಗಮನದಲ್ಲಿದೆಯೆ ?

ಶ್ರೀ ಆರ್. ಗುಂಡೂರಾವ್.—ಇದೆ.

Acquisition of Land for the Construction of Sub-Jail at Nanjangud Town.

325. Sri K. B. Shivaiah (Nanjangud).—Will the Minister of State for Horticulture & Prisons be pleased to state.—

(a) whether it has come to the notice of Government that a land was acquired and preserved for purpose of constructing a Sub-Jail at Nanjangud ;

(b) the estimated cost of the construction of this Sub-Jail and staff quarters ;

(c) when the Government proposes to start this construction work ?

Sri K. Yenkatappa (Minister of State for Horticulture and Prisons).—

(a) Yes.

(b) The estimate for the construction of this Sub-Jail has been prepared. The estimated cost of the construction of Staff quarters is Rs. 3.57 lakhs.

(c) It is proposed to start the construction work during the year 1981-82.

ಶ್ರೀ ಕೆ.ಬಿ. ಶಿವಯ್ಯ.—ಸಬ್-ಜೈಲ್ ಕಟ್ಟುವುದಕ್ಕಾಗಿ ಸ್ಥಳವನ್ನು ಯಾವಾಗ ವಶಕ್ಕೆ ತೆಗೆದು ಕೊಳ್ಳಲಾಯಿತು ?

ಶ್ರೀ ಕೆ. ವೆಂಕಟಪ್ಪ.—೧೯೮೧-೮೨ರಲ್ಲಿ.

ಶ್ರೀ ಕೆ. ಬಿ ಶಿವಯ್ಯ.—೧೯೮೧ರಲ್ಲಿ ಸ್ಥಳವನ್ನು ವಶಕ್ಕೆ ತೆಗೆದುಕೊಂಡಿದ್ದರೂ ಸಬ್-ಜೈಲ್ ಕಟ್ಟಡವನ್ನು ಕಟ್ಟಲು ಮನಸ್ಸು ಮಾಡದೆ ಇರುವುದಕ್ಕೆ ಪ್ರಬಲವಾದ ಕಾರಣವೇನು ?

ಶ್ರೀ ಕೆ. ಯಂಕಟಪ್ಪ —ಸ್ಥಳವನ್ನು ಪಶಕ್ಕೆ ತೆಗೆದುಕೊಳ್ಳಲಾಗಿದೆ. ಜೊತೆಗೆ ಸಿಬ್ಬಂದಿ ವರ್ಗಕ್ಕೂ ವಸತಿ ಕಟ್ಟಿಸಲು ೧೯೮೧-೮೨ನೇ ಸಾಲಿಗೆ ಅಂದಾಜು ತಯಾರು ಮಾಡಿ ಆಯವ್ಯಯವನ್ನೂ ಒದಗಿಸಲಾಗಿದೆ. ಕಟ್ಟಡ ಕಟ್ಟದೇ ಇರುವುದಕ್ಕೆ ಕಾರಣವೇನೆಂದರೆ ಕಾರಣವೇನೂ ಇಲ್ಲ.

ಶ್ರೀ ಕೆ.ಬಿ. ಶಿವಯ್ಯ —ಇಂದು ಮೈಸೂರಿನ ಖೈದಿಗಳನ್ನು ನಂಜನಗೂಡಿಗೆ ತರುವುದು ಅವಶ್ಯವಿದೆ. ಅಲ್ಲಿ ದನಗಳೂ ಕೂಡ ವಾಸ ಮಾಡಲಿಕ್ಕೆ ಯೋಗ್ಯವಲ್ಲದ ಜಾಗದಲ್ಲಿ ಖೈದಿಗಳನ್ನು ಇಡುತ್ತಿದ್ದಾರೆ. ಆದುದರಿಂದ ನಂಜನಗೂಡಿನಲ್ಲಿ ಸಬ್‌ಜೈಲನ್ನು ಕಟ್ಟಿಸುವುದಕ್ಕಾಗಿ ಜಾಗವನ್ನು ವಶಪಡಿಸಿಕೊಂಡಿದ್ದರೂ ಕಟ್ಟಡ ಕಟ್ಟದೇ ಇರುವುದಕ್ಕೆ ಕಾರಣವೇನೆಂದರೆ ಮಾನ್ಯ ಸಚಿವರು ಕಾರಣವೇನೂ ಇಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಕೆ. ಯಂಕಟಪ್ಪ —ನೌಕರರ ವಸತಿ ಬಗ್ಗೆ ಈ ಒಂದು ಅಂದಾಜು ತಯಾರು ಮಾಡಿ ಒದಗಿಸಲಾಗಿದೆ. ಇದರ ಜೊತೆಗೆ ಜೈಲಿನ ಕಟ್ಟಡವನ್ನು ಕಟ್ಟಿಸಲಿಕ್ಕೆ ಅಂದಾಜು ತಯಾರು ಮಾಡಬೇಕೆಂದು ಲೋಕೋಪಯೋಗಿ ಇಲಾಖೆಯವರಿಗೆ ಆದೇಶ ಕೊಡಲಾಗಿದೆ. ಇದಕ್ಕಾಗಿ ಸ್ವಲ್ಪ ಹಣವನ್ನು ೧೯೮೧-೮೨ನೇ ಸಾಲಿನಲ್ಲಿ ಒದಗಿಸಲಾಗಿದೆ. ಆದುದರಿಂದ ಇದರಲ್ಲಿ ಕಾರಣವೇನೂ ಇಲ್ಲ. ಅಂದಾಜು ತಯಾರಾಗುವುದು ಸ್ವಲ್ಪ ತಡವಾಗಿದೆ. ಅದನ್ನು ಬೇಗ ತಯಾರಿಸಲಿಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ.ಬಿ. ಶಿವಯ್ಯ.—ಹೊಸದಾಗಿ ನಂಜನಗೂಡಿನಲ್ಲಿ ಕಟ್ಟುವ ಸಬ್‌ಜೈಲಿಗೆ ಬೇರೆ ಕಡೆಯಿಂದ ಆರ್ಕಿಟೆಕ್ಟ್‌ಗಳನ್ನು ಕರೆಸಿ, ಕಟ್ಟಡದ ವಿನ್ಯಾಸವನ್ನು ತಯಾರು ಮಾಡಬೇಕಾಗಿಲ್ಲ. ಯಾವುದೋ ಒಂದು ಊರಿನಲ್ಲಿ ಕಟ್ಟಿರುವ ರೀತಿಯೇ ನಂಜನಗೂಡಿನಲ್ಲೂ ಸಬ್‌ಜೈಲನ್ನು ಕಟ್ಟಬಹುದು. ಆದುದರಿಂದ, ಈ ವರ್ಷ ಆದಷ್ಟು ಬೇಗ ಅಂದಾಜು ತಯಾರು ಮಾಡಿ, ಮುಂದಿನ ವರ್ಷವಾದರೂ ಸಬ್‌ಜೈಲು ಮತ್ತು ನೌಕರರ ವಸತಿ ಗೃಹಗಳನ್ನು ಕಟ್ಟಿಸಲಿಕ್ಕೆ ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಇದಕ್ಕೆ ಉತ್ತರ ಹೇಳಿದ್ದೇನೆ. ಈಗಾಗಲೇ ಇದಕ್ಕೆ ಸುಮಾರು ೩.೭೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಜೈಲ್ ಕಟ್ಟುವುದಕ್ಕೆ ಸುಮಾರು ೫ ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಹೇಳಲಾಗಿದೆ. ಜೈಲುಗಳನ್ನು ಆಧುನಿಕವಾಗಿ ಕಟ್ಟಬೇಕೆಂಬ ಪ್ರಶ್ನೆ ಇದೆ. ಒಂದು ಮಾದರಿಯಾದ ರೂಪದಲ್ಲಿ ಜೈಲನ್ನು ಕಟ್ಟುವುದಕ್ಕೆ ಸಾಧ್ಯವಿದ್ದರೆ, ಆರ್ಕಿಟೆಕ್ಟ್‌ಗಳನ್ನು ಕರೆಸಬೇಕಾದ ಪ್ರಶ್ನೆ ಬರುತ್ತದೆ.ಆದುದರಿಂದ, ೧೯೮೧-೮೨ನೇ ಸಾಲಿನಲ್ಲಿ ೫ ಲಕ್ಷ ರೂಪಾಯಿಗಳನ್ನು ಒದಗಿಸಿರುವುದರ ಜೊತೆಗೆ ೩.೭೫ ರೂ.ಗಳನ್ನು ನೌಕರರ ವಸತಿ ಗೃಹ ಕಟ್ಟಿಸಲಿಕ್ಕೂ ಒದಗಿಸಿದ್ದೇವೆ. ಇದನ್ನು ಶೀಘ್ರ ಗತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Misappropriation of funds in Co-operative Societies in D.K. Dist.

406. SRI K. RAMA BHAT (Puttur).—Will the Minister for Cof operation be pleased to state :—

(a) the amount misappropriated in the Co-operative Societies o-Dakshina Kannada district of the Karnataka State since 1978 (taluk-wise details may be furnished);

(b) the total number of suits filed in this matter ;

(c) the number of persons convicted and awarded punishments;

(d) the amount recovered from the guilty persons ;

(e) the amount which cannot be recovered ?